**ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ , ಹಿರಿಯೂರು**

ಸಿ ಸಿ ನಂ.1187/2021

| | | | |
|---|---|---|---|
| ಹೆಸರು | - | ಖಲೀಲ್ ಉಲ್ಲಾ ಎಂ ಹೆಚ್ | CW-13<br>PW-5 |
| ತಂದೆ ಹೆಸರು | - | ಹುಸೇನ್ ಪೀರ್ ಎಂ ಹೆಚ್ | |
| ವಯಸ್ಸು | - | 62 ವರ್ಷ | |
| ಉದ್ಯೋಗ | - | ನಿವೃತ್ತ ಎ ಎಸ್ ಐ | |
| ವಾಸಸ್ಥಳ | - | ದಾವಣಗೆರೆ | |

ದಿನಾಂಕಃ12.08.2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

**ಸಾಕ್ಷಿದಾರರ ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ**

ನಾನು ದಿಃ25.01.2017 ರಿಂದ 31.05.2022 ರವರೆಗೆ ಹಿರಿಯೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಎ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ 25.10.2020 ರಂದು 9.45 ಗಂಟೆ ಸವಯದಲ್ಲಿ ನಾನು ಠಾಣೆಯಲ್ಲಿದ್ದಾಗ ಚಾಸಾ.1 ರವರು ಠಾಣೆಗೆ ಬಂದು ಮೃತ ಜಂಗ್ಲಿ ವೀರಪ್ಪನವರು ಅಪಘಾತದಿಂದ ಮೃತಪಟ್ಟಿದ್ದಾರೆ ಎಂದು ಹೆಚ್ಚುವರಿ ಹೇಳಿಕೆ ನೀಡಿದ್ದು ನಾನು ಅದನ್ನು ಸ್ವೀಕರಿಸಿ ನ್ಯಾಯಾಲಯಕ್ಕೆ ಕೋರಿಕೆ ಅರ್ಜಿಯನ್ನು ಸಲ್ಲಿಸಿ ಕಲಂ.304 (ಎ) ರಡಿಯಲ್ಲಿ ಅಳವಡಿಸಿಕೊಳ್ಳಲು ಮನವಿ ನೀಡಿರುತ್ತೇನೆ. ಸಾಕ್ಷಿ ಹೆಚ್ಚುವರಿ ದೂರನ್ನು ನೋಡಿ ಗುರುತಿಸಿದ್ದರಿಂದ ಅದರಲ್ಲಿರುವ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ಕೋರಿಕೆ ಪತ್ರದಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-12 ಎಂದು ಸಹಿಯನ್ನು ನಿಪಿ-12(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಆರೋಪಿ ಪರ ಶ್ರೀ ಆರ್ ಟಿ ಎಸ್ ವಕೀಲರಿಂದಃ**

ದಿಃ 25.10.2020 ರಂದು 9.45 ಗಂಟೆ ಸಮಯದಲ್ಲಿ ನಾನು ಠಾಣೆಯಲ್ಲಿದ್ದಾಗ ಚಾಸಾ.1 ರವರು ಠಾಣೆಗೆ ಬಂದು ಮೃತ ಜಂಗ್ಲಿ ವೀರಪ್ಪನವರು ಅಪಘಾತದಿಂದ ಮೃತಪಟ್ಟಿದ್ದಾರೆ ಎಂದು ಹೆಚ್ಚುವರಿ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ದೂರನ್ನು ಸ್ವೀಕರಿಸಿ

ನ್ಯಾಯಾಲಯಕ್ಕೆ ಕೋರಿಕೆ ಅರ್ಜಿಯನ್ನು ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡದಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು